ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ಬಿಳಿಗಿರಿ ರಂಗನ ಬೆಟ್ಟದ ದೇವಾಲಯ ನಿರ್ಮಾಣ ಕಾಮಗಾರಿಗಳ ಬಗ್ಗೆ

ಶ್ರೀಎಸ್.ನಾಗರಾಜ್(ಸಂದೇಶ್ನಾಗರಾಜ್)(ಸ್ಥಳೀಯಸಂಸ್ಥೆಗಳಕ್ಷೇತ್ರ):-

1206 (1415) ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಿಳಿಗಿರಿ ರಂಗನ ಬೆಟ್ಟ ದೇವಾಲಯ ನಿರ್ಮಾಣದ ಕಾಮಗಾರಿಗಳು ಪ್ರಾರಂಭವಾಗಿದ್ದು ಯಾವಾಗ; ಇದುವರೆಗೆ ಪೂರ್ಣವಾಗಿರುವ ಕಾಮಗಾರಿಗಳು ಯಾವುವು; ಇನ್ನು ಬಾಕಿ ಉಳಿದಿರುವ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳಿಗೆ ಮಂಜೂರಾಗಿದ್ದ ಅನುದಾನ ಎಷ್ಟು; ಎಷ್ಟು ಹಣ ಇದುವರೆಗೆ ಖರ್ಚಾಗಿದೆ;

(ಪೂರ್ಣ ವಿವರಗಳನ್ನು ಒದಗಿಸುವುದು) ಖಾಸಗಿ ವ್ಯಕ್ತಿಗಳು ಯಾವುದಾದರೂ ಕಾಮಗಾರಿಗಳನ್ನು ಮಾಡಿಸಿಕೊಟ್ಟಿರುವರೇ ಅಥವಾ ಮಾಡಿಸಿಕೊಡಲು ಮುಂದೆ ಬಂದಿರುವರೆ; ಅವರಿಗೆ ಕಾಮಗಾರಿಗಳ ನಿರ್ಮಾಣವನ್ನು ವಹಿಸಲಾಗಿದೆಯೇ;

(ಆ) ಕಾಮಗಾರಿಗಳ ವಿಳಂಬದಿಂದ ಜನವರಿ 16 ರಂದು ನಡೆಯಬೇಕಾಗಿದ್ದ ಚಿಕ್ಕ ಜಾತ್ರೆ ರದ್ದಾಗಿದೆಯೇ; ಮೇ 27ರಿಂದ ಜೂನ್ 1 ರಂದು ಪುನರ್ ಪ್ರತಿಷ್ಠಾಪನೆಗೆ ಸೂಕ್ತ ಕಾಲ ಎಂದು ತೀರ್ಮಾನಿಸಲಾಗಿದೆಯೇ; ಅದರೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದೇ; ಇನ್ನೂ ಎಷ್ಟು ಅನುದಾನದ ಅಗತ್ಯ ಇದೆ; (ವಿವರ ಒದಗಿಸುವುದು)

(ಇ) ಚಾಮರಾಜನಗರ ಚಾಮರಾಜೇಶ್ವರ ರಥದ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ; ಇದು ಯಾವಾಗ ಪೂರ್ಣಗೊಳ್ಳುತ್ತದೆ; ರಥೋತ್ಸವ ರದ್ದಾಗಿ ಭಕ್ತಜನರ ಧಾರ್ಮಿಕ ಬಾವನೆಗಳಿಗೆ ಕುಂದು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೂಡಲೇ ರಥ ನಿರ್ಮಾಣ ಕಾಮಗಾರಿಗಳನ್ನು ಮುಗಿಸಿ, ರಥೋತ್ಸವ ನಡೆಸಲು ಅನುಕೂಲ ಮಾಡಿಕೊಡಲಾಗುವುದೇ ?